ಶ್ರೀ ಸಿ. ಭೈರೇಗೌಡ: ಕಾಲೇಜಿನ ಬಗ್ಗೆ ಏನೂ ಹೇಳಿಲ್ಲ. ಈಗ ನಾನು ಪ್ರಾಥಮಿಕ ಶಾಲೆಗಳ, ಪ್ರೌಢಶಾಲೆಗಳ, ಪದವಿಪೂರ್ವ ಕಾಲೇಜುಗಳ ಮತ್ತು ಕಾಲೇಜುಗಳ ಸ್ಥಿತಿ-ಗತಿಯ ಬಗ್ಗೆ ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ: ಸನ್ಮಾನ್ಯ ಅಧ್ಯಕ್ಷರೇ, ಈಗ ಪ್ರೌಢಶಾಲೆಗಳಿಗೆ ಮಂಜೂರಾದಂಥ ಹುದ್ದೆಗಳು ಏನು ಇವೆ, ಅದನ್ನು ಇಡೀ ರಾಜ್ಯದಲ್ಲಿ ಇನ್ನೊಂದು ತಿಂಗಳೊಳಗಾಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ. ಬರುವ ಅಕಾಡೆಮಿಕ್ ವರ್ಷದಲ್ಲಿ ಮಂಜೂರಾದಂಥ ಹುದ್ದೆಗಳನ್ನು ಕೋಲಾರದಲ್ಲಿ ತುಂಬುತ್ತೇವೆ. ಇನ್ನು ಕಾಲೇಜು ಅಧ್ಯಾಪಕರುಗಳ ಹುದ್ದೆ ಬಗ್ಗೆ ನಾನು ಹಣಕಾಸಿನ ಇಲಾಖೆ ಜೊತೆಯಲ್ಲಿ ಈಗಾಗಲೇ ಚರ್ಚಿಸಿದ್ದೇನೆ. ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹುದ್ದೆಗಳು ಖಾಲಿ ಬಿದ್ದಿವೆ. ಅಂತಹ ಹುದ್ದೆಗಳನ್ನು ನಾವು ಮುಂದೆ ಬರತಕ್ಕಂಥ ಅಕಾಡೆಮಿಕ್ ವರ್ಷದಲ್ಲಿ ಭರ್ತಿ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ.

ಶ್ರೀ ಸಿ. ಭೈರೇಗೌಡ: ಕೋಲಾರ ಜಿಲ್ಲೆಯಲ್ಲಿ ಶಿಕ್ಷಕರ ನೇಮಕಾತಿಗೆ ಸೀಮಿತಗೊಳಿಸಿರುವ ಅಂಕಿ-ಅಂಶಗಳನ್ನು ಕೊಟ್ಟಿಲ್ಲ. ರಾಜ್ಯದಲ್ಲಿ ಕಾಲೇಜುಗಳು ಎಷ್ಟಿವೆ? ಅದಕ್ಕೂ ಉತ್ತರ ಕೊಟ್ಟಿಲ್ಲ ಮತ್ತು ಅಧ್ಯಾಪಕರ ಹುದ್ದೆಗಳು ಎಷ್ಟಿವೆ? ಇವೆಲ್ಲದರ ವಿವರ ಕೊಡಲು ಮಾನ್ಯ ಮಂತ್ರಿಗಳಿಗೆ ತಿಳಿಸಬೇಕು.

ಅಧ್ಯಕ್ಷರು: ಎಲ್ಲಾ ಮಾಹಿತಿಯನ್ನು ಕೊಡುತ್ತಾರೆ.

ಶಿಕ್ಷಕರ ನೇಮಕಾತಿ ಬಗ್ಗೆ

719 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚಿನ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನು ಮಾತ್ರ ನೇಮಕ ಮಾಡಿಕೊಳ್ಳಬೇಕೆಂಬ ನಿಯಮವನ್ನು ಅನುಸರಿಸಿದ್ದು ನಿಜವೇ?

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆ ಒಂದು ಪ್ರತ್ಯೇಕ ಜಿಲ್ಲೆಯಾಗಿದ್ದು ಈ ಜಿಲ್ಲೆಗೆ ಶಿಕ್ಷಕರ ನೇಮಕಾತಿಯನ್ನು ಯಾವ ನಿಯಮದಡಿ ಅನುಸರಿಸಲಾಯಿತು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು):

ಅ) ನಿಯಮಗಳ ಪ್ರಕಾರ ಆಯಾ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿದ ಅಭ್ಯರ್ಥಿಗಳ ಪಟ್ಟಿಯ ಆಧಾರದಮೇಲೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಆ) ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗಾಗಿ ನೇಮಕಾತಿ ನಿಯಮಗಳನ್ನು ಅಧಿಸೂಚನೆ ಸಂಖ್ಯೆ: ಇಡಿ 25 ಪಿ.ಎಂ.ಎಸ್. 90 ದಿನಾಂಕ 20-12-90ರಲ್ಲಿ ವಿಶೇಷ ನಿಯಮಗಳನ್ನು ರಚಿಸಿದೆ. ಸದರಿ ನಿಯಮಗಳ ನಿಯಮ 5 ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ಶಿಕ್ಷಕರ ನೇಮಕಾತಿಗಾಗಿ ಆಯ್ಕೆಮಾಡಿದೆ.

ಶ್ರೀ ಸಿ.ಎಂ. ಲಿಂಗಪ್ಪ : ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚಿಗೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಆಯ್ಕೆಮಾಡಿದಂಥ ವಿಶಿಷ್ಟ ಪರಿಸ್ಥಿತಿಯ ಬಗ್ಗೆ ಸಂಕ್ಷಿಪ್ತ ವಿವರಣೆಯನ್ನು ಕೊಡುತ್ತಿದ್ದೇನೆ.

ಸಭಾಧ್ಯಕ್ಷರು: ಸಂಕ್ಷಿಪ್ತ ವಿವರಣೆ ಬೇಕಾಗಿಲ್ಲ; ಪ್ರಶ್ನೆಯನ್ನು ಕೇಳಿ.

ಶ್ರೀ ಸಿ.ಎಂ. ಲಿಂಗಪ್ಪ: ಆಯಾ ಜಿಲ್ಲೆಯ ಅಭ್ಯರ್ಥಿಗಳನ್ನು ಆಯಾ ಜಿಲ್ಲೆಗಳಿಗೆ ನೇಮಕ ಮಾಡಿಕೊಳ್ಳಬೇಕೆಂಬ ಆದೇಶ ಇದೆ. ಇದರ ಪ್ರಕಾರ ಈಗ ಬೆಂಗಳೂರು ಜಿಲ್ಲೆಯಲ್ಲಿ ಒಂದು ವಿಶಿಷ್ಟವಾದ ಪರಿಸ್ಥಿತಿ ಇದೆ. ಬೆಂಗಳೂರು ದಕ್ಷಿಣ ಜಿಲ್ಲೆ,

ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಒಂದೇ ಒಂದು ಉದ್ಯೋಗ ವಿನಿಮಯ ಕೇಂದ್ರ ಇದ್ದು, ಗ್ರಾಮಾಂತರ ಜಿಲ್ಲೆಯ ಅಭ್ಯರ್ಥಿಗಳು ನೇಮಕಾತಿಯಲ್ಲಿ ವಂಚಿತರಾಗಿದ್ದು, ಇದರಿಂದ ಬಹಳ ಜನರಿಗೆ ಅನಾನುಕೂಲವಾಗಿದೆ. ನಗರ ಜಿಲ್ಲೆಗಳಿಂದ ಬಂದಂಥ ಅಭ್ಯರ್ಥಿಗಳು ಶೇಕಡ 70 ಮಾತ್ರ ಆಯ್ಕೆಯಾಗಿದ್ದಾರೆ. ಗ್ರಾಮಾಂತರ ಜಿಲ್ಲೆಯ ಅಭ್ಯರ್ಥಿಗಳು ಈ ಹುದ್ದೆಗಳನ್ನು ದೊರಕಿಸಿಕೊಳ್ಳುವಲ್ಲಿ ವಂಚಿತರಾಗಿದ್ದಾರೆ, ತಮ್ಮ ಮೂಲಕ ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಮುಂದೆ ಆಗತಕ್ಕ ನೇಮಕಾತಿಯಲ್ಲಿ ಒಂದು ನಿರ್ದಿಷ್ಟವಾದ ನೀತಿಯನ್ನು ನಿರೂಪಿಸಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಪ್ರತ್ಯೇಕವಾದ ಒಂದು ನೇಮಕಾತಿ ವ್ಯವಸ್ಥೆ ಮಾಡಿಕೊಡುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ 1990ರ ನಿಯಮಾವಳಿ ಪ್ರಕಾರ ನಾವು ಆಯಾ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರಗಳಿಂದ ಪಟ್ಟಿಯನ್ನು ತರಿಸಿಕೊಂಡು ಅದನ್ನು ಪರಿಷ್ಕರಿಸಿ ನಿಯಮದ ಪ್ರಕಾರ ಮೀಸಲಾತಿ ಅನ್ವಯಮಾಡಿ, 29 ವರ್ಷ ಮೇಲ್ಪಟ್ಟವರಿಗೆ ಪ್ರಾಧಾನ್ಯತೆ ಕೊಟ್ಟು, ಅಂತಹವರ ಪಟ್ಟಿ ಮಾಡಲಾಗಿದೆ. ಬೆಂಗಳೂರು ಗ್ರಾಮಾಂತರಕ್ಕೆ ಮತ್ತು ಬೆಂಗಳೂರು ನಗರ ಜಿಲ್ಲೆಗೆ ಒಂದೇ ಒಂದು ಉದ್ಯೋಗ ವಿನಿಮಯ ಕೇಂದ್ರ ಇರುವುದರಿಂದ ನಾವು ಕಾಮನ್ ಲಿಸ್ಟನ್ನು ತಯಾರುಮಾಡಿಕೊಂಡು ಗ್ರಾಮಾಂತರ ಜಿಲ್ಲೆ ಮತ್ತು ನಗರ ಜಿಲ್ಲೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ಹಂಚಬೇಕಾಗುತ್ತದೆ.

ಸನ್ಮಾನ್ಯ ಸದಸ್ಯರು ಹೇಳಿದಂಥ ಒಂದು ಆತಂಕ ಬಹಳ ನಿಜವಾಗಿ ಒಪ್ಪಬೇಕಾದಂಥ ಒಂದು ಆತಂಕ. ಆದರೆ ಈಗ ಏನಾಗಿದೆ ಎಂದರೆ ಈ ನಿಯಮಾವಳಿ ಪ್ರಕಾರ ನಾವು ಏನೂ ಸಹಾಯಮಾಡುವ ಹಾಗೆ ಇಲ್ಲ. ಏಕೆಂದರೆ, ಒಂದೇ ಒಂದು ಉದ್ಯೋಗ ವಿನಿಮಯ ಕೇಂದ್ರ ಇರುವುದರಿಂದ, ಗ್ರಾಮಾಂತರದವರು ಯಾರು, ನಗರದವರು ಯಾರು ಎಂದು ವಿಂಗಡಿಸಿಕೊಂಡು ಮಾಡಲಿಕ್ಕೆ ನಿಯಮ ಇಲ್ಲ ಮತ್ತು ಅದು ಕಾನೂನು ಬದ್ಧ ಕೂಡ ಆಗಿರುವುದಿಲ್ಲ. ಆದರೆ ನಾನು ಈಗಾಗಲೇ ಕಾರ್ಮಿಕ ಇಲಾಖೆಯವರ ಜೊತೆ ಆ ಬಗ್ಗೆ ಸಮಾಲೋಚನೆ ಮಾಡಿದ್ದೇನೆ. ಈಗ ಏನಾಗುತ್ತದೆ ಎಂದರೆ, ಇದು ಬರೀ ಶಿಕ್ಷಕರ ನೇಮಕಾತಿಗೆ ಸಂಬಂಧ ಇರುವುದಿಲ್ಲ. ಅನೇಕ ನೇಮಕಾತಿಗಳಲ್ಲಿ ಕೂಡ ಬೆಂಗಳೂರು ಗ್ರಾಮಾಂತರ ಜಿಲ್ಲೆಯವರಿಗೆ ಇದರಿಂದ ಬಹಳ ತಾರತಮ್ಯ ಆಗುತ್ತದೆ. ಬಹಳ ತೊಂದರೆಯಾಗುತ್ತದೆ ಎಂಬ ವಿಚಾರವನ್ನು ಒಪ್ಪಿ, ನಾವು ಪ್ರತ್ಯೇಕವಾಗಿ ಗ್ರಾಮಾಂತರ ಜಿಲ್ಲೆಗಳಿಗೆ ಎಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮತ್ತು ನಗರ ಜಿಲ್ಲೆಯವರಿಗೆ ಒಂದು ಪ್ರತ್ಯೇಕ ರಚನೆ ಮಾಡಲಿಕ್ಕೆ ನಾವು ನಮ್ಮ ಶಿಕ್ಷಣ ಇಲಾಖೆಯಿಂದ ಕಾರ್ಮಿಕ ಇಲಾಖೆ ಜೊತೆಯಲ್ಲಿ ಮಾತನಾಡಿದ್ದೇವೆ. ಮುಂದೆ ಬರತಕ್ಕಂಥ ನೇಮಕಾತಿ ಏನು ಇದೆ, ಅದರಲ್ಲಿ ಏನಾದರೂ ತೊಂದರೆಯಾಗಿದ್ದರೆ, ಸರಿಯಾದಂಥ ಪಾಲು ಸಿಕ್ಕದೇ ಇದ್ದರೆ, ಆ ಕೊರತೆಯನ್ನು ನೀಗಿಸಲಿಕ್ಕೆ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಎರಡು ಮಾಡಿದಮೇಲೆ ಅದು ಸಾಧ್ಯವಾಗುತ್ತದೆ. ಅದರ ಪ್ರಯತ್ನ ನಾವು ಮಾಡುತ್ತೇವೆ. ಕಾನೂನಿನಲ್ಲಿ ಎರಡು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮಾಡಲಿಕ್ಕೆ ಏನು ತೊಂದರೆ ಆಗದಿದ್ದರೆ ಇದನ್ನು ಮಾಡುತ್ತೇವೆ.

ಕುಂದಗೋಳ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ಬಗ್ಗೆ

44 - ಶ್ರೀ ಗೋವಿಂದಪ್ಪ ಹನುಮಂತಪ್ಪ ಜುಟ್ಟಲ್ (ಕುಂದಗೋಳ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಗೋಳ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡದ ನಿರ್ಮಾಣ ಕಾರ್ಯವು ಯಾವ ಹಂತದಲ್ಲಿದೆ?